ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ರೂಪ ಬಾಹ್ಯ ವಿದ್ಯಾರ್ಥಿ. ವಿಜಯನಗರ ಕಾಲೇಜಿನಿಂದ ಬಿ.ಎ. ಪದವಿ ಪಡೆದರು. ಮೈಸೂರು ರಂಗಾಯಣದ 'ಮಲೆಗಳಲ್ಲಿ ಮದುಮಗಳು' ನಾಟಕದ ಪಾತ್ರಧಾರಿಯಾದರು. ಮೆಡಿಕಲ್ ಸ್ಟೋರ್, ಪಿಓಪಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿದರು. ಸಮುದಾಯದ ನಡುವೆ ಕೆಲಸ ಮಾಡಲು ಸಖಿ ಫೆಲೋಶಿಪ್ ನೀಡಿತು.

ಬುಡಕಟ್ಟು ಮಹಿಳೆಯರಿಗಾಗಿ ಕೆಲಸ ಮಾಡುವ ಹೈದರಾಬಾದಿನ ಧಾತ್ರಿ ಸಂಸ್ಥೆಯಲ್ಲಿ ಒಂದು ವರ್ಷ ತರಬೇತಿ ಪಡೆದ ರೂಪ, ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ತರಗತಿ ಪ್ರವೇಶ ಪರೀಕ್ಷೆಗೆ ತರಬೇತಿ ಪಡೆಯಲು ಮಹಾರಾಷ್ಟ್ರಕ್ಕೆ ತೆರಳಿದರು. ನಂತರ ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್‌ಸೈನ್ಸ್ ಮತ್ತು ಬೆಂಗಳೂರಿನ ಅಜೀಂ ಪ್ರೇಂ ಜಿ ವಿಶ್ವವಿದ್ಯಾಲಯದಲ್ಲಿ ಅವಕಾಶ ದೊರಕಿತ್ತು. ಬೆಂಗಳೂರನ್ನೇ ಆಯ್ಕೆ ಮಾಡಿಕೊಂಡರು.

ಉನ್ನತ ವ್ಯಾಸಂಗಕ್ಕೆ ಶಿಕ್ಷಣ ವಿಷಯವನ್ನೇ ಏಕೆ ಆಯ್ಕೆ ಮಾಡಿಕೊಂಡಿರಿ? ಎಂದರೆ. 'ನಾನು, ನಮ್ಮ ಮನೆಯವರೆಲ್ಲರೂ ಡ್ರಾಪ್ ಔಟೇ ಅಲ್ವಾ, ಅದಕ್ಕೇ' ಎಂದು ನಕ್ಕರು.



## ಶ್ರುತಿ ಹರಿಹರನ್

ಅವಕಾಶಗಳಿಗಾಗಿ ಹಲವು ಬಗೆಯ ರಾಜಿ ಮಾಡಿಕೊಳ್ಳುವವರು ಸಿನಿಮಾರಂಗದಲ್ಲಿ ಸಾಮಾನ್ಯ. ಆದರೆ, ಅವಕಾಶಗಳು ಕೈತಪ್ಪುತ್ತವೆಂದು ತಿಳಿದೂ ವ್ಯವಸ್ಥೆಯನ್ನು ಎದುರು ಹಾಕಿಕೊಂಡವರು ಶ್ರುತಿ ಹರಿಹರನ್. ಪ್ರಖ್ಯಾತ ನಟ ಅರ್ಜುನ್ ಸರ್ಜಾ ಅವರಿಂದ ತಮಗೆ ಅಹಿತಕರ ಅನುಭವ ಉಂಟಾಗಿದೆ ಎಂದು ಹೇಳುವ ಮೂಲಕ 2018ರಲ್ಲಿ 'ಮೀ ಟೂ' ಆಂದೋಲನ ಕರ್ನಾಟಕದಲ್ಲಿ ಸಶಕ್ತವಾಗಿ ಅಭಿವ್ಯಕ್ತಗೊಳ್ಳಲು ಕಾರಣವಾದ ಕೀರ್ತಿ ಶ್ರುತಿ ಅವರಿಗೆ ಸಲ್ಲಬೇಕು.

ಶ್ರುತಿ ಅವರದ್ದು ಹೋರಾಟದ ಬದುಕು. ಅಪ್ಪನ ಅಕಾಲಿಕ ಮರಣದಿಂದಾಗಿ, ಅಮ್ಮನ ಕಣ್ಣಳತೆಯಲ್ಲಿಯೇ ಬೆಳೆದ ಅವರು ಶಾಲಾಕಾಲೇಜು ದಿನಗಳಿಂದಲೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದವರು. ಕಾಲೇಜಿನ ನಂತರ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯೊಂದನ್ನು ಸ್ವಲ್ಪ ಕಾಲ ನಡೆಸಿದರು. ಕಾಲೇಜು ದಿನಗಳಲ್ಲಿನ ನೃತ್ಯದ ಆಸಕ್ತಿಯೇ ಸಿನಿಮಾದಲ್ಲಿ ಅವಕಾಶಗಳನ್ನು ಪಡೆಯಲು ಕಾರಣವಾಯಿತು. ಮೊದಲಿಗೆ ಸಮೂಹನೃತ್ಯಗಳಲ್ಲಿ ಬಳುಕಿ ಮರೆಯಾಗುತ್ತಿದ್ದ ಶ್ರುತಿ, ನಿಧಾನವಾಗಿ ನಾಯಕಿ ಸ್ಥಾನಕ್ಕೆ ಬಂದು ನಿಂತರು.

'ಲೂಸಿಯಾ', 'ಬ್ಯೂಟಿಫುಲ್ ಮನಸುಗಳು', 'ದ್ಯಾವ್ರೆ', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' – ಇವೆಲ್ಲ ಶ್ರುತಿ ಅವರನ್ನು ಕಲಾವಿದೆಯಾಗಿ ಗಟ್ಟಿಗೊಳಿಸಿದ ಚಿತ್ರಗಳು. ಪ್ರಸ್ತುತ ಪ್ರದರ್ಶನ ಕಾಣುತ್ತಿರುವ 'ನಾತಿಚರಾಮಿ' ಶ್ರುತಿ ಅಭಿನಯದ ಮತ್ತೊಂದು ಉತ್ತಮ ಚಿತ್ರ.

ನಟನೆಗಷ್ಟೇ ತೃಪ್ತಿ ಕಾಣದ ಅವರು, ನಿರ್ದೇಶನದ ಮಹತ್ವಾಕಾಂಕ್ಷೆಯನ್ನೂ ಹೊಂದಿದ್ದಾರೆ. ಅದಕ್ಕೆ ತಯಾರಿಯ ರೂಪದಲ್ಲಿ ಕಿರುಚಿತ್ರಗಳ ನಿರ್ಮಾಣದಲ್ಲೂ ತೊಡಗಿಕೊಂಡಿದ್ದಾರೆ.

ಸಿನಿಮಾ ಹಾಗೂ ಸಮಾಜದಲ್ಲಿ ಹೆಣ್ಣಿನ ದನಿಯ ಅಗತ್ಯವನ್ನು ಗಟ್ಟಿ ದನಿಯಲ್ಲಿ ಪ್ರತಿಪಾದಿಸುವ ಶ್ರುತಿ, ಸದ್ಯಕ್ಕೆ ಪುರುಷಪ್ರಧಾನ ಸಮಾಜದಲ್ಲಿ ಒಂಟಿದನಿಯಂತೆ ಕಾಣಿಸಿದರೂ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಅವರ ಹೋರಾಟ–ಸಂಘರ್ಷ ಗುರ್ತಿಸಲೇಬೇಕಾದ ಒಂದು ಅಧ್ಯಾಯವಾಗಿ ಉಳಿಯಲಿದೆ. 'ಮೀ ಟೂ' ಕಾರಣಗಳಿಂದಾಗಿ ಬೇಡಿಕೆ ಕಳೆದುಕೊಂಡಂತೆ ಕಾಣಿಸುತ್ತಿರುವ ಶ್ರುತಿ ಹರಿಹರನ್, 2019ರಲ್ಲಿ ನಟನೆಗೆ ಹೊರತಾದ ಬೇರೊಂದು ಸೃಜನಶೀಲ ರೂಪದಲ್ಲಿ ಸಹೃದಯರೆದುರು ನಿಂತರೆ ಅಚ್ಚರಿಯೇನಿಲ್ಲ.

## ಎಂ.ಆರ್. ಪೂವಮ್ಮ

ಕೊಡಗಿನ ಎಂ.ಆರ್.ಪೂವಮ್ಮ ಕನ್ನಡ ನಾಡಿಗೆ ಮಾತ್ರವಲ್ಲ; ಇಡೀ ದೇಶದ ಪಾಲಿಗೆ ಚಿನ್ನದ ಹುಡುಗಿ. ಕರ್ನಾಟಕದ ಪಿ.ಟಿ. ಉಷಾ.

28ರ ಹರಯದ ಪೂವಮ್ಮ ಸದ್ಯ ಮಂಗಳೂರಿನಲ್ಲಿ ನೆಲೆಸಿದ್ದಾರೆ. ಹಲವು ವರ್ಷಗಳಿಂದ ಕ್ರೀಡಾ ಅಂಗಳದಲ್ಲಿ ಸಾಧನೆಯ ಮಹಲ್ ಕಟ್ಟುತ್ತಿರುವ ಈ ಹುಡುಗಿಗೆ 2018 ಮರೆಯಲಾಗದ ವರ್ಷ. ಅದಕ್ಕೆ ಗೆದ್ದ ಪದಕಗಳೇ ಸಾಕ್ಷಿ. ಇಂಡೊನೇಷ್ಯಾದ ಜಕಾರ್ತದಲ್ಲಿ ನಡೆದ 2018ರ ಏಷ್ಯನ್ ಕ್ರೀಡಾಕೂಟದ 4x400 ಮೀಟರ್ಸ್ ರಿಲೇನಲ್ಲಿ ಚಿನ್ನ ಹಾಗೂ ಮಿಶ್ರ ರಿಲೇನಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ. ಇದೊಂದು ಅದ್ಭುತ ಸಾಧನೆ. ಜಕಾರ್ತದಲ್ಲಿ ಕ್ರೀಡಾಕೂಟದಲ್ಲಿ ನಡೆಯುತ್ತಿದ್ದಾಗಲೇ ಕೊಡಗಿನಲ್ಲಿ ಪ್ರವಾಹ ಉಂಟಾಗಿತ್ತು. ಅಲ್ಲಿ ಗೆದ್ದ ಪದಕಗಳನ್ನು ಪೂವಮ್ಮ ತಮ್ಮೂರಿನ ನಿರಾಶ್ರಿತರಿಗೆ ಸಮರ್ಪಣೆ ಮಾಡಿ ಎಲ್ಲರ ಹೃದಯ ಗೆದ್ದವರು.

'ಪೂವಮ್ಮ ಈ ವರ್ಷ ನಿರೀಕ್ಷೆಗೂ ಮೀರಿದ ಸಾಧನೆ ಮಾಡಿದ್ದಾಳೆ. ಏಷ್ಯನ್ ಕ್ರೀಡಾಕೂಟದಲ್ಲಿ ಎರಡು ಪದಕ ಗೆಲ್ಲುವುದು ಹುಡುಗಾಟದ ವಿಷಯವಲ್ಲ. ಸದ್ಯ ಒಂದು ತಿಂಗಳಿನಿಂದ ಟರ್ಕಿಯಲ್ಲಿ ಅಭ್ಯಾಸ ನಡೆಸುತ್ತಿದ್ದಾಳೆ' ಎಂದು ಮಗಳ ಬಗ್ಗೆ ರಾಜು ಹೆಮ್ಮೆಯಿಂದ ಮಾತನಾಡುತ್ತಾರೆ.

2014ರ ಇಂಚೆನ್ ಏಷ್ಯನ್ ಕ್ರೀಡಾಕೂಟದಲ್ಲೂ ಭಾರತಕ್ಕೆ ಚಿನ್ನ ತಂದುಕೊಟ್ಟಿದ್ದರು. 2008ರಲ್ಲಿ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಅತಿ ಕಿರಿಯ ಅಥ್ಲೀಟ್ ಅವರು. 2016ರ ರಿಯೊ ಒಲಿಂಪಿಕ್ಸ್‌ನಲ್ಲೂ ಪಾಲ್ಗೊಂಡಿದ್ದರು. 400 ಮೀಟರ್ ಓಟ ಹಾಗೂ 4x400 ಮೀಟರ್ಸ್ ರಿಲೇನಲ್ಲಿ ಏಷ್ಯಾದಲ್ಲೇ ಪ್ರಸಿದ್ಧಿ ಹೊಂದಿದ್ದಾರೆ.

ಈ ಚಿನ್ನದ ಹುಡುಗಿಗೆ 2018ರಲ್ಲಿ ಮೈಸೂರು ದಸರಾ ಕ್ರೀಡಾಕೂಟ ಉದ್ಘಾಟಿಸುವ ಅವಕಾಶ ಲಭಿಸಿತ್ತು. ಈಗ ಅವರ ಗುರಿ ಇರುವುದು 2020ರಲ್ಲಿ ನಡೆಯಲಿರುವ ಒಲಿಂಪಿಕ್ಸ್ ಮೇಲೆ. ಅದಕ್ಕೂ ಮೊದಲು ಏಷ್ಯನ್ ಚಾಂಪಿಯನ್‌ಶಿಪ್ ಮತ್ತು ವಿಶ್ವ ಚಾಂಪಿಯನ್‌ಶಿಪ್ ಎದುರಿದೆ.

